ದಿಃ 19-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಿ ವಿಚಾರಣೆಗೆ ಒಳಪಡಿಸಲಾಯಿತು.

ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಗೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತವೆ ಮತ್ತು ಸದ್ರಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ..

**<u>ಪಾಟೀ ಸವಾಲು ಃ ಪ್ರತಿವಾದಿಗಳ</u>** ಪರ ಶ್ರೀ ಎ.ಎಮ್. ಪಿ. ವಕೀಲರಿಂದ.

ನಮ್ಮ ಅಜ್ಜನ ಹೆಸರು ದೇಮಣ್ಣ ಪೊನ್ನಪ್ಪ ಕೊರವೆಕರ ಎಂದು ಇರುತ್ತದೆ . ನಮ್ಮ ಅಜ್ಜ ಮತ್ತು ಪ್ರತಿವಾದಿಗಳ ಅಜ್ಜ ಅಣ್ಣ ತಮ್ಮದಂದಿರು ಆಗಬೇಕು . ನಮ್ಮ ಅಜ್ಜನ ಅಣ್ಣ ತಮ್ಮಂದಿರು ಒಟ್ಟು 4 ಜನ ಇದ್ದರು . ನಮ್ಮ ಅಜ್ಜ ಜೀವಂತ ಇದ್ದಾಗ ಅವರು ತಮ್ಮ ಅಣ್ಣ ತಮ್ಮಂದಿರೊಂದಿಗೆ ತಮ್ಮ ಕುಟುಂಬದ ಆಸ್ತಿಗಳ ಕುರಿತು ಪಾಲು ವಿಭಜನೆ ಮಾಡಿಕೊಂಡಿರುತ್ತಾರೆ . ಆ ರೀತಿ ಪಾಲು ವಿಭಜನೆ ಮಾಡಿಕೊಂಡಾಗ ಪ್ರತಿವಾದಿಗಳ ಅಜ್ಜನ ಹೆಸರಿಗೆ ಯಾವ ಯಾವ ಆಸ್ತಿಗಳು ಬಂದಿರುತ್ತವೆ ಎಂದು ನನಗೆ ಹೇಳಲು ಬರುವುದಿಲ್ಲ . ಪ್ರತಿವಾದಿಗಳ ತಂದೆ ತಮ್ಮ ಅಣ್ಣ ತಮ್ಮಂದಿರೊಂದಿಗೆ ಯಾವಾಗ ಪಾಲು ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ . ಸದರಿ ಪಾಲು ವಿಭಜನೆಯಲ್ಲಿ ಯಾರು ಯಾರಿಗೆ ಯಾವ ಯಾವ ಭಾಗ ಬಂದಿರುತ್ತದೆ ಎಂದು ಸಹ ನನಗೆ ಗೊತ್ತಿರುವುದಿಲ್ಲ . ಪ್ರತಿವಾದಿಗಳ ಪಾಲಿಗೆ ಬಂದ ಜಮೀನುಗಳ ಉತಾರೆಗಳನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ವಾದಿಯೇ ಹೇಳಿ ಬರೆಯಿಸಿರುತ್ತಾನೆ ನಾನು ಹೇಳಿ ಬರೆಸಿರುವುದಿಲ್ಲ. ಪ್ರತಿವಾದಿ ಸಂಖ್ಯೆ 1 ರಿಂದ 5 ರವರು ಬೇರೆ ಬೇರೆ ವಾಸವಾಗಿರುತ್ತಾರೆ ಎಂದರೆ ಸರಿ . ಪ್ರತಿವಾದಿ ಸಂಖ್ಯೆ 8 ಮತ್ತು 9 ರವರು ಸಹ ಬೇರೆ ಬೇರೆಯಾಗಿ ವಾಸವಾಗಿರುತ್ತಾರೆ ಎಂದರೆ ಸರಿ . ಪ್ರತಿವಾದಿಗಳ ತಂದೆಯ ಪಾಲಿಗೆ ಬಂದ ಆಸ್ತಿಯಲ್ಲಿ ಪ್ರತಿವಾದಿಗಳು ಪಾಲು ವಿಭಜನೆ ಮಾಡಿಕೊಂಡು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ಪ್ರತಿವಾದಿಗಳ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರು ಸಹ ವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆ ಃ ಏನು ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ).

ಓ.ಹೇ.ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ. ಹಳಿಯಾಳ.